ಆ) ತೀವ್ರ ಸಮುದ್ರ ಕೊರತೆ ಸಮಸ್ಯೆ ಇರುವ ಮಂಗಳೂರಿನ ಉಳ್ಳಾಲದಲ್ಲಿ ಈ ತಂತ್ರಜ್ಞಾನವನ್ನು ಪ್ರಾಯೋಗಿಕವಾಗಿ ಅಳವಡಿಸಲು ಯೋಜಿಸಿದೆ. ಇದರ ವೈಶಿಷ್ಟ ಬೀಚನ್ನು ಕೊರೆತದಿಂದ ತಪ್ಪಿಸುವುದಲ್ಲದೆ ನೈಸರ್ಗಿಕ ಮರಳು ಮರು ಶೇಖರಣೆಯಾಗಿ ಬೀಚನ್ನು ವೃದ್ಧಿಯಾಗುವಂತೆ ಮಾಡುತ್ತದೆ.

ಮಂಗಳೂರಿನಲ್ಲಿ ಹಾಸ್ಟೆಲು ವಸತಿ ಸೌಲಭ್ಯ ಒದಗಿಸುವುದು

4207 (4767) : ಶ್ರೀ ಯೋಗೇಶ್ ಭಟ್ ಎನ್. (ಮಂಗಳೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರವಾದ ಮಂಗಳೂರಿನಲ್ಲಿ 2003–04ರ ಸಾಲಿನಲ್ಲಿ ವಿದ್ಯಾಭ್ಯಾಸ ಮುಂದುವರೆಸಲು ಹಾಗೂ ಹಾಸ್ಟೆಲುನಲ್ಲಿ ವಸತಿ ಸೌಲಭ್ಯ ಪಡೆಯಲು ಬಂದಿರುವ ಪರಿಶಿಷ್ಟ ವರ್ಗಗಳ/ಪರಿಶಿಷ್ಟ ಜಾತಿಗಳ, ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಅರ್ಜಿ ಎಷ್ಟು; ಈ ಹಾಸ್ಟೆಲ್‌ನಲ್ಲಿ ಎಷ್ಟು ಜನರಿಗೆ ವಸತಿ ಸೌಲಭ್ಯ ಕೊಡಲಾಗಿದೆ;

ಆ) ಮಂಗಳೂರಿನ ಉರ್ವಾ ಬೆಲಸೆ ಪೇಟೆಯ ಪರಿಶಿಷ್ಟ ವಿದ್ಯಾರ್ಥಿ ಹಾಸ್ಟೆಲ್‌ನ ಸ್ಥಿತಿಗತಿ ಏನು; ನಿರ್ವಹಣೆಗೆ ತಗುಲಿರುವ ಖರ್ಚು ಎಷ್ಟು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸ್ವೀಕರಿಸಿದ ಅರ್ಜಿಗಳ ಸಂಖ್ಯೆ ಈ ಕೆಳಕಂಡಂತಿದೆ :–

ಇಲಾಖೆ	ಅರ್ಜಿಗಳ ಸಂಖ್ಯೆ	ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ
ಸಮಾಜ ಕಲ್ಯಾಣ ಇಲಾಖೆ	247	158
ಹಿಂದುಳಿದ ವರ್ಗಗಳ ಇಲಾಖೆ	482	405
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	50	50
ಅಲ್ಪಸಂಖ್ಯಾತರ ಇಲಾಖೆ	68	50

ಆ) ಉರ್ವಾವೆಲ್ಫ್ (ಬೋಲಾರ್) ಮಂಗಳೂರು ಇಲ್ಲಿನ ಎಸ್.ಸಿ./ಎಸ್.ಟಿ. ವಿದ್ಯಾರ್ಥಿನಿಲಯವು ಬಹಳ ಕಾಲದಿಂದ ಕಟ್ಟಲ್ಪಡುತ್ತಿದ್ದು, ದುಸ್ಥಿತಿಯಲ್ಲಿದೆ. ಈ ಅಪೂರ್ಣಗೊಂಡ ಕಟ್ಟಡವನ್ನು ಕೆಡವಿ ಒಂದು ಹೊಸ ಕಟ್ಟಡವನ್ನು ರೂ. 48.00 ಲಕ್ಷದ ಅಂದಾಜಿನಲ್ಲಿ ನಿರ್ಮಿಸಲು ಜಿಲ್ಲಾ ಪಂಚಾಯತ್ ನಿರ್ಣಯಿಸಿದೆ. ಸರ್ಕಾರದ ಆದೇಶ ಸಂಖ್ಯೆ ಸಕಇ 327 ವಕವಿ 2002 ದಿನಾಂಕ: 23–5–2002ರನ್ವಯ ಆಡಳಿತಾತ್ಮಕ ಅನುಮೋದನೆ ನೀಡಿ ರೂ. 24.00 ಲಕ್ಷಗಳನ್ನು ಸಹ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಜಿಲ್ಲಾ ಪಂಚಾಯತ್ ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಬಿಡುಗಡೆ ಮಾಡಿದೆ. ವಿದ್ಯಾರ್ಥಿನಿಲಯದ ನಿರ್ವಹಣೆಗೆ ಏನೂ ಹಣ ಖರ್ಚು ಮಾಡಿರುವುದಿಲ್ಲ.

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಬ್ಸಿಡಿ

4208 (4788) : ಶ್ರೀ ಯೋಗೀಶ್ ಭಟ್ ಎನ್ (ಮಂಗಳೂರು) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳು ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಣ್ಣ ಪ್ರಮಾಣದ ಕೈಗಾರಿಕೆಗಳು ಕಳೆದ 3 ವರ್ಷಗಳಲ್ಲಿ ಎಷ್ಟು ಮುಚ್ಚಿವೆ? ಈಗ ಒಟ್ಟಾರೆ ಎಷ್ಟು ಕೈಗಾರಿಕೆಗಳು ಕಾರ್ಯ ನಿರ್ವಹಿಸುತ್ತವೆ?

ಆ) ಅವುಗಳು ಎದುರಿಸುತ್ತಿರುವ ಸಮಸ್ಯೆಗಳೇನು;

ಇ) ಸಣ್ಣ ಕೈಗಾರಿಕೆಗಳಿಗೆ ಕೊಡಲು ಬಾಕಿಯಿರುವ ಸಬ್ಸಿಡಿ ಹಣ ಎಷ್ಟು: ಜಿಲ್ಲಾವಾರು ವಿವರ ನೀಡುವುದು:

ಈ) ಬಾಕಿಯಿರುವ ಸಬ್ಸಿಡಿ ಹಣವನ್ನು ಯಾವಾಗ ಸರ್ಕಾರ ಬಿಡುಗಡೆ ಮಾಡುವುದು; ವಿವರ ಒದಗಿಸುವುದು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆಗಳು ಹಾಗು ಹಜ್ ಸಚಿವರು)

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ 45,547 ಸಣ್ಣ ಕೈಗಾರಿಕೆಗಳು ನೋಂದಣಿಯಾಗಿರುತ್ತವೆ. ಕೇಂದ್ರ ಸರ್ಕಾರದ ಸಮೀಕ್ಷಾ ವರದಿ ಪ್ರಕಾರ ಶೇ. 50:ರಷ್ಟು ಘಟಕಗಳು ರೋಗಗ್ರಸ್ಥ ಅಥವಾ ಮುಚ್ಚಿರುವುದಾಗಿ ವರದಿಯಾಗಿದೆ. ಉಳಿದ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿವೆ.

ಆ) ಕೈಗಾರಿಕೆಗಳು ಕೆಳಕಂಡ ಸಮಸ್ಯೆಗಳನ್ನು ಎದುರಿಸುತ್ತಿವೆ.

1. ಕೈಗಾರಿಕಾ ಹಿಂಜರಿತ
2. ದುಡಿಮೆ ಬಂಡವಾಳದ ಕೊರತೆ
3. ವಿಳಂಬ ಪಾವತಿ
4. ಮಾಲೀಕತ್ವದ ತಗಾದೆಗಳು
5. ವಿದ್ಯುತ್ ಸಮಸ್ಯೆ
6. ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಹಿಂಜರಿತ

ಇ) ದಿನಾಂಕ: 31.3.03ರ ಅಂತ್ಯಕ್ಕೆ 18279 ಸಣ್ಣ ಕೈಗಾರಿಕಾ ಘಟಕಗಳಿಗೆ ರೂ. 405.67 ಕೋಟಿಗಳಷ್ಟು ಸಹಾಯಧನ ಮೊತ್ತ ಬಿಡುಗಡೆಗಾಗಿ ಬಾಕಿ ಇರುವುದು. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಈ) ಆಯವ್ಯಯದಲ್ಲಿ ಹೆಚ್ಚಿನ ಅನುದಾನವನ್ನು ಒದಗಿಸಿ ಆದಷ್ಟು ಬೇಗನೆ ಬಾಕಿಯಿರುವ ಸಹಾಯಧನವನ್ನು ಬಿಡುಗಡೆ ಮಾಡಲು ವಿಶೇಷ ಪ್ರಯತ್ನವನ್ನು ಮಾಡಲಾಗುತ್ತಿದೆ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರೂ. 12.56 ಕೋಟಿಗಳನ್ನು ಒದಗಿಸಲಾಗಿದೆ. ಹೆಚ್ಚುವರಿ ಸಂಪನ್ಮೂಲವನ್ನು ಬಾಂಡ್ ಮುಖಾಂತರ ಅಥವಾ ಹೆಚ್ಚುವರಿ ಆಯವ್ಯಯ ಅನುದಾನದ ಮುಖಾಂತರ ಕ್ರೋಢೀಕರಿಸಿ ಸಬ್ಸಿಡಿ ಮೊತ್ತವನ್ನು ಆದಷ್ಟು ಬೇಗನೆ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

Details of State Investment District wise pendency as on March 2002

Sl. No.	Name of the District	No. of Units	Total Amount
1.	Bangalore (U)	1349	6353.38
2.	Bangalore (R)	1750	5196.97
3.	Bagalkot	401	715.87
4.	Belgaum	1448	1955.27
5.	Bellary	602	1557.28
6.	Bidar	554	521.25
7.	Bijapur	503	779.11

1	2	3	4
8.	Chamarajnagar	223	266.93
9.	Chitradurga	411	886.85
10.	Chickmagalur	281	427.53
11.	Davanagere	302	678.24
12.	Dharwad	704	1518.14
13.	Dakshina Kannada	874	1787.23
14.	Gadag	320	333.59
15.	Gulbarga	429	1028.54
16.	Hassan	576	844.57
17.	Haveri	237	286.00
18.	Karwar	1154	1809.27
19.	Kodagu	150	378.03
20.	Kolar	1625	3662.06
21.	Koppal	235	985.35
22.	Mandya	401	576.81
23.	Mysore	913	2452.00
24.	Raichur	242	616.61
25.	Shimoga	421	695.91
26.	Tumkur	1269	2681.62
27.	Udupi	905	1653.75
	Total	**18279**	**40567.36**

ಮಂಗಳೂರಿನಲ್ಲಿ ವಿದ್ಯಾರ್ಥಿ ಹಾಸ್ಟೆಲ್ ಒದಗಿಸುವುದು

4209 (4790) : ಶ್ರೀ ಯೋಗೇಶ್ ಭಟ್ ಎಸ್. (ಮಂಗಳೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಿಲ್ಲಾ ಕೇಂದ್ರವಾದ ಮಂಗಳೂರಿನಲ್ಲಿ ದೂರದ ಊರುಗಳಿಂದ ಬರುತ್ತಿರುವ ಪರಿಶಿಷ್ಟ ಜಾತಿ, ವರ್ಗದ ವಿದ್ಯಾರ್ಥಿಗಳಿಗೂ ಹಾಗೂ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ ಹೆಚ್ಚುವರಿ ವಿದ್ಯಾರ್ಥಿ ಹಾಸ್ಟೆಲುಗಳನ್ನು ಆರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಆ) ಹಾಗಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಮತ್ತು ಆ)

ಮಂಗಳೂರಿನಲ್ಲಿ ಸದ್ಯದಲ್ಲೆ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸುವ ಪ್ರಸ್ತಾವನೆಯಿರುವುದಿಲ್ಲ.